

ಗಣೇಶ್ ಅರಳೀಕಟ್ಟೆ

# ಕನಸಿನ ಅರ್ಥ

ಒಂದು ಊರಿನಲ್ಲಿ ಇವಾನ್ ಎಂಬ ಯುವಕನಿದ್ದ. ಅವನು ಬಹಳ ಬಡವ. ಒಂದು ರಾತ್ರಿ ಅಲ್ಲಿನ ರಾಜನಿಗೆ ಒಂದು ಕನಸು ಬಿತ್ತು. ಅವನ ಅರಮನೆಯ ಮೇಲೆ ಕೆಳಗೆ ನರಿ ನೆಗೆದಾಡುತ್ತಿರುವಂತೆ ಕಂಡ. ಆ ಕನಸನ್ನು ತನ್ನ ಮಂತ್ರಿಗಳಿಗೆ ವಿವರಿಸಿ ಅದರ ಅರ್ಥ ಏನೆಂದು ಕೇಳಿದ. ಆದರೆ ಯಾರಿಗೂ ಅದರ ಅರ್ಥ ಹೇಳಲು ಸಾಧ್ಯವಾಗಲಿಲ್ಲ. ಈ ಕನಸಿನ ಅರ್ಥವನ್ನು ಸರಿಯಾಗಿ ಹೇಳಿದವರಿಗೆ ಬಹುಮಾನ ಕೊಡುವುದಾಗಿ ಘೋಷಿಸಿದ. ಈ ಘೋಷಣೆ ಕೇಳಿದ ಇವಾನ್ ತನಗೆ ಬಹುಮಾನ ಸಿಕ್ಕಿದರೆ ಸುಖವಾಗಿ ಬದುಕಬಹುದಿತ್ತು. ಆದರೆ ಕನಸಿನ ಅರ್ಥ ತನಗೆ ತಿಳಿದಿಲ್ಲವಲ್ಲ ಎಂದು ತನ್ನಲ್ಲೆ ಹೇಳಿಕೊಂಡ. ಅಷ್ಟರಲ್ಲಿ ಒಂದು ಪುಟ್ಟ ಹಕ್ಕಿ ಅವನನ್ನು ನೋಡಿ 'ನನಗೆ ನೀನು ಬಹುಮಾನದಲ್ಲಿ ಅರ್ಧ ಕೊಡುವುದಾದರೆ ನಿನಗೆ ಕನಸಿನ ಅರ್ಥವನ್ನು ಹೇಳುತ್ತೇನೆ' ಎಂದು ಹೇಳಿತು. ಇವಾನ್ ಇದಕ್ಕೆ ಒಪ್ಪಿದ. ಆಗ ಆ ಹಕ್ಕಿಯು 'ಅರಮನೆ ಈ ರಾಜ್ಯದ ಸಂಕೇತ, ಅರಮನೆ ಸುತ್ತ ನರಿ ನೆಗೆಯುತ್ತಿದೆ ಎಂದರೆ ಈ ರಾಜ್ಯ ಬರಿ ಮೋಸ, ವಂಚನೆಯಿಂದ ತುಂಬಿದೆ, ಇಂತಹ ಮೋಸಗಾರರ ಬಗ್ಗೆ ರಾಜ ಎಚ್ಚರವಹಿಸಬೇಕು' ಎಂದು ವಿವರಿಸಿತು.

ಇವಾನ್ ರಾಜನ ಬಳಿಗೆ ಹೋಗಿ ಕನಸಿನ ತಾತ್ಪರ್ಯವನ್ನು ಬಣ್ಣಿಸಿದ. ಇದರಿಂದ ರಾಜನಿಗೆ ಬಹಳ ಸಂತೋಷವಾಗಿ ಬಹುಮಾನವನ್ನು ಕೊಟ್ಟ. ತನಗೆ ಬಂದ ಹಣದಿಂದ ಒಳ್ಳೆಯ ಬದುಕು ಸಿಗುತ್ತದೆ ಎಂದು ಇವಾನ್ ಸಂಭ್ರಮಿಸಿದ. ಆದರೆ ಅದರಲ್ಲಿ ಅರ್ಧವನ್ನು ಹಕ್ಕಿಗೆ ಕೊಡಬೇಕಲ್ಲ ಎಂದು ಬೇಸರವಾಯಿತು. ಆ ಹಕ್ಕಿಯಿಂದ ತಪ್ಪಿಸಿಕೊಳ್ಳಲು ಅವನು ಬೇರೆ ದಾರಿಯಿಂದ ತನ್ನ ಊರನ್ನು ತಲುಪಿದ. ಬಹುಮಾನದ ಹಣದಿಂದ ಶ್ರೀಮಂತನಾಗಿ ಜೀವನ ನಡೆಸತೊಡಗಿದ.

ಸ್ವಲ್ಪ ವರ್ಷ ಹೀಗೆಯೇ ಕಳೆಯಿತು. ಒಂದು ದಿನ ರಾಜನ ದೂತರು ಬಂದು ರಾಜನನ್ನು ತಕ್ಷಣ ಕಾಣಬೇಕೆಂದು, ರಾಜನಿಗೆ ಮತ್ತೊಂದು ಕನಸು ಕಂಡಿದ್ದು ಅದರ ಅರ್ಥ ತಿಳಿಸಬೇಕೆಂದು ಹೇಳಿದರು. ಒಂದು ಚೂರಿ ಅರಮನೆಯ ಸುತ್ತ ಸುತ್ತುತ್ತಿರುವಂತೆ ರಾಜನು ಕನಸು ಕಂಡಿದ್ದನು. ಇವಾನನಿಗೆ ಏನು ಮಾಡಬೇಕೆಂದು ತಿಳಿಯಲಿಲ್ಲ. ಬೇರೆ ವಿಧಿ ಇಲ್ಲದೆ ಅರಮನೆಯ ಕಡೆಗೆ ಹೊರಟ. ಆಗ ದಾರಿಯಲ್ಲಿ ಅದೇ ಹಕ್ಕಿಯನ್ನು ನೋಡಿದ. ಹಕ್ಕಿ ಹೋದ ಬಾರಿ ಹೇಳಿದ ಷರತ್ತನ್ನೇ ಈ ಬಾರಿಯೂ ಹೇಳಿತು. ಅದಕ್ಕೆ ಇವಾನ್ ಒಪ್ಪಿದ. 'ಚೂರಿ ಹಿಂಸೆಯ ಸಂಕೇತ. ರಾಜ್ಯ ಮತ್ತು ರಾಜನ ಸುತ್ತ ಶತ್ರುಗಳು ತುಂಬಿದ್ದಾರೆ. ಎಲ್ಲೆಲ್ಲೂ ಹಿಂಸೆ ಹುಟ್ಟಿಕೊಂಡಿದೆ' ಅಂತ ಹೇಳಿ ಹಾರಿ ಹೋಯಿತು.

ಇವಾನನು ಈ ವಿವರಣೆಯನ್ನು ರಾಜನಿಗೆ ತಿಳಿಸಿದಾಗ ರಾಜನು ಹೇರಳವಾಗಿ ಹಣವನ್ನು ಕೊಟ್ಟ. ಹಕ್ಕಿಗೆ ಅರ್ಧ ಹಣ ಕೊಡಬೇಕೆಂದು ಸಂಕಟವಾಯಿತು. ತಾನು ಹಣ ಕೊಡದೇ ಇದ್ದರೆ ಹಕ್ಕಿ ರಾಜನ ಬಳಿ ಹೋಗಿ ತನ್ನ ವಿರುದ್ಧ ಹೇಳಬಹುದು ಎಂದು ಯೋಚಿಸಿದ. ಆ ಹಕ್ಕಿಯನ್ನು